


## ಉತ್ತಮ ಚಿತ್ರಬರಹ

'ಸುಧಾ' ಏ.25ರ ಸಂಚಿಕೆಯ ಬಿ.ವಿ.ಪ್ರಕಾಶ್‌ರ ಮುಖಪುಟ ಚಿತ್ರಲೇಖನ 'ಏಳು ತಂಪು ತಾಣಗಳು' ಉತ್ತಮ ಮಾಹಿತಿ ನೀಡಿದೆ. ಚಿತ್ರಗಳು ಚೆನ್ನಾಗಿವೆ, ಮುಖಪುಟ ಚಿತ್ರ ಮಬ್ಬಾಗಿದೆ.

–ರವೀಂದ್ರನಾಥ ಶಿ.ಯಡಹಳ್ಳಿ, ಬೀಳಗಿ/ ಬಿ.ಎನ್.ಸೊಲ್ಲಾಪುರೆ, ಕಮಲನಗರ/ ಡಿ.ಎಸ್.ಪಂಕಜ ಸುಬ್ರಮಣ್ಯಂ, ಬೆಂಗಳೂರು/ ನಿತ್ಯ ಎಸ್., ಮೂಡಬಿದಿರೆ

## ಅಪರೂಪದ ಮಾಹಿತಿ

ಪ್ರಮುಖ ತಾಣಗಳಿಗೆ ಭೇಟಿ ನೀಡಲು ಲಕ್ಷಗಟ್ಟಲೆ ಬೇಕಾಗಬಹುದೇನೋ ಎಂಬ ಅಂದಾಜಿರುತ್ತದೆ. ಆದರೆ ಹತ್ತನ್ನೆರಡು ಸಾವಿರ ರೂ.ಗಳಲ್ಲಿ ಪ್ರವಾಸ ಸಾಧ್ಯ ಎಂಬ ಮಾಹಿತಿ ನೀಡಿದ 'ಸುಧಾ ಪತ್ರಿಕೆಗೆ ಧನ್ಯವಾದಗಳು.

–ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ

## ನೇಪಾಳಕ್ಕೆ ಹೋಗಿಯೇತೀರುವೆ

ನೆರೆಯ ನೇಪಾಳ ದೇಶಕ್ಕೆ ಹೋಗಲು ವೀಸಾ ಬೇಡ, ಡಾಲರ್ ಬೇಡ, ನಮ್ಮ 100ರೂ. ಅಲ್ಲಿ 160ರೂ. ಆಗುತ್ತದೆ ಎಂಬ ವಿಷಯಗಳನ್ನು ಪ್ರಕಾಶ್ ಲೇಖನದಲ್ಲಿ ತಿಳಿದುಕೊಂಡು ಖುಷಿ ಆಯಿತು. ನೇಪಾಳದಲ್ಲಿ ಕರ್ನಾಟಕದ ಪುರೋಹಿತರೂ ಇದ್ದಾರೆ ಎಂದು ಕೇಳಿದ್ದೇನೆ. ಕೇವಲ ಹತ್ತಿಪ್ಪತ್ತು ಸಾವಿರ ರೂ.ಗಳಲ್ಲಿ ನೇಪಾಳಕ್ಕೆ ಹೋಗಿ ಬರಬಹುದು. ಅಕ್ಟೋಬರ್‌ನಲ್ಲಿ ಹೋಗಲೇಬೇಕು ಎಂಬ ಸಂಕಲ್ಪವನ್ನು ನನ್ನಲ್ಲಿ ಮೂಡಿಸಿತು ಲೇಖನ.

–ನಾರಾಯಣ ಯಾಜಿ, ಶಿರಾಲಿ

## ಜಾತಿಸೂಚಕ ಬೇಕೆ?

ಶಿಕಾಕು ಅವರ 'ಜಾತಿಸೂಚಕ ಹೆಸರುಗಳು' ವಿಚಾರ ಲಹರಿ ಸಕಾಲಿಕ. ನಮ್ಮ ಸಮಾಜಕ್ಕೆ ಹಾಗೂ ದೇಶಕ್ಕೆ ಜಾತೀಯತೆ ಎಂಬುದು ದೊಡ್ಡ ಶಾಪವಾಗಿದೆ. ಶಿಕ್ಷಿತರಾದವರಲ್ಲಿ ಕೂಡಾ ಹೆಚ್ಚಿನವರು ಈ 'ಜಾತಿಸೂತಕ'ದಿಂದ ಹೊರತಲ್ಲ. ಜಾತಿ ಕುಲ ಸೂಚಕ ನಾಮಗಳನ್ನು ಕೆಲವರು ತಮ್ಮ ಮೇಲರಿಮೆ ಅಥವಾ ಪೂರ್ವ ಪ್ರತಿಷ್ಠೆಯ ಪ್ರದರ್ಶನಕ್ಕಾಗಿ ಬಳಸಬಹುದು. ಕೆಲವರು ರಾಜಕೀಯ ಲಾಭಕ್ಕೆ ಇರಿಸಿಕೊಳ್ಳಬಹುದು. ಕೇವಲ ಗತಾನುಗತಿಕವಾಗಿಯೂ ಕೆಲವರು ಜಾತಿಸೂಚಕ ಹೆಸರುಗಳನ್ನು ಇಟ್ಟುಕೊಳ್ಳಬಹುದು. ಆದರೆ ಜಾತಿಸೂಚಕಕ್ಕೆ ಬದಲಾಗಿ ತಮ್ಮ ಊರಿನ ಹೆಸರುಗಳನ್ನು ಬಳಸುವುದು ಹೆಚ್ಚು ಅರ್ಥಪೂರ್ಣ.

ಕ್ರೈಸ್ತರಲ್ಲಿ ಕೆಲ ದಶಕಗಳಿಂದೀಚೆಗೆ 'ಭಾರತೀಯ' (ಹಿಂದೂ ಎನ್ನುವುದಕ್ಕಿಂತ 'ಭಾರತೀಯ' ಎನ್ನುವುದೇ ಯುಕ್ತ) ಹೆಸರುಗಳನ್ನು ಇಟ್ಟುಕೊಳ್ಳುವ ವಿಚಾರ ರೂಢಿಯಾಗುತ್ತಿರುವುದು ಅಭಿನಂದನೀಯ. ಕ್ರೈಸ್ತ 'ಪಾದ್ರಿ'ಗಳಲ್ಲಿ ಫಾದರ್ ಪ್ರಶಾಂತ್, ಫಾದರ್ ಸದಾನಂದ, ಫಾದರ್ ರತ್ನಾಕರ; ಕ್ರೈಸ್ತ 'ಸನ್ಯಾಸಿನಿ'ಯರಲ್ಲಿ ಸಿಸ್ಟರ್ ವಿಮಲಾ, ಸಿಸ್ಟರ್ ನಿರ್ಮಲಾ ಹೆಸರುಗಳನ್ನು ಕಾಣಬಹುದು. ಇದು ಒಳ್ಳೆಯ ಬೆಳವಣಿಗೆ. ಮುಸ್ಲಿಮರಲ್ಲೂ ಈ ಮನೋಭಾವ ರೂಢಿಯಾದರೆ ಸಾಮಾಜಿಕ ಸಾಮರಸ್ಯ ರೂಪುಗೊಳ್ಳುವುದು. ದೇಶೀಯ ಏಕತೆಯ ವಿಚಾರದಲ್ಲಿ ಮಾತನಾಡುವವರು ಗಮನಿಸಬೇಕಾದ ವಿಚಾರವಿದು.

–ಪ್ರೊ.ಅಮೃತ ಸೋಮೇಶ್ವರ, ಕೋಟೆಕಾರ್

## ವ್ಯಕ್ತಿತ್ವ ರೂಪಿಸುವ ಪುಸ್ತಕ

ಪುಸ್ತಕಗಳು ಖಂಡಿತಾ ವ್ಯಕ್ತಿತ್ವ ರೂಪಿಸುತ್ತವೆ. ಏ.23ರ ಪುಸ್ತಕ ದಿನಕ್ಕೆ ಕಾಳೀಹುಂಡಿ ಶಿವಕುಮಾರ್ ಲೇಖನ ಅತ್ಯಂತ ಸಮಯೋಚಿತವಾಗಿತ್ತು.

–ಎಂ.ಸಿದ್ದರಾಜು, ಶಿರಮಳ್ಳಿ/ ಎಚ್.ಎಂ.ಅನಂತ ಪದ್ಮನಾಭ, ಬಿ.ಮಹದೇವ ಮೂರ್ತಿ, ಮೈಸೂರು/ ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ/ ವಿ.ಆರ್.ಪಾಟೀಲ, ಧಾರವಾಡ/ ಕೆ.ಎಂ.ಲಿಂಗರಾಜು, ನಂಜನಗೂಡು

## ಉತ್ತಮ ಕಥೆ, ಚಿತ್ರ

ಏ.18ರ ಸಂಚಿಕೆಯಲ್ಲಿ ಹೇಮಂತಕುಮಾರ ದೇಸಾಯಿ ಅವರ 'ಜಾತಕ' ಕಥೆ, ಏ.25ರಲ್ಲಿ ಟಿ.ಎಂ.ಸುಬ್ಬರಾಯರ 'ಗುಹ' ಕಥೆ ಚೆನ್ನಾಗಿದ್ದವು. 'ಗುಹ' ಕಥೆಗೆ ಚಿತ್ರಸೋಮರ ಚಿತ್ರ ಬಹಳ ಚೆನ್ನಾಗಿತ್ತು.

–ಕೊಹಿಮ, ಬಸರಕೋಡು

## ರಾಗಿ ಅತ್ಯುತ್ತಮ ಆಹಾರ

ಆಹಾರ ಪುಟದಲ್ಲಿ 'ರಾಗಿ ಎಂಬ ರಾಮಧಾನ್ಯ' ಓದಿ ಖುಷಿಯಾಯಿತು. ರಾಗಿ ಸರ್ವೋತ್ಕರ್ಷ ಆಹಾರ. ಹಾಗೆಯೇ ಜೋಳ ಸಜ್ಜೆಯಂತಹ ಆಹಾರ ಧಾನ್ಯಗಳ ಬಗ್ಗೆಯೂ ಆಹಾರ ಪುಟದಲ್ಲಿ ಆಗಾಗ ಪ್ರಕಟಿಸಿರಿ. ಏಕೆಂದರೆ ಜೋಳ ಹೆಚ್ಚು ಜನರ ಆಹಾರ.

–ಶ್ಯಾಮಸುಂದರ, ಬೆಂಗಳೂರು/ ಪ್ರಹ್ಲಾದ ಹಾದಿಮನಿ, ಕೊಪ್ಪಳ

## ನಕ್ಕುಬಿಡಿ



*ಉ. ಸಂಪಾದಕ:* (ಸಂಪಾದಕನಿಗೆ), ಸಾರ್, ನಾವು ಮಿನಿಕತೆ ಬೇಕು ಅಂತ ಜಾಹೀರಾತುಕೊಟ್ಟಿದ್ದೆವಲ್ಲ.

*ಸಂಪಾದಕ:* ಹೌದು, ಏನೀಗ.

*ಉ.ಸಂ.* ಯಾರೋ ಒಬ್ಬರು ಬಸ್ ಚೀಟಿಯಲ್ಲಿ ಕತೆ ಬರೆದು ಕಳಿಸಿದ್ದಾರೆ.

★★★

*ರಂಗಮ್ಮ:* ರೀ ಸೀತಮ್ಮ, ಮೈಸೂರು ಪಾಕು ತುಂಬಾ ಚೆನ್ನಾಗಿದೆ. ಇದನ್ನು ಹೇಗೆ ಮಾಡಿದಿರಿ.

*ಸೀತಮ್ಮ:* ಸ್ವಲ್ಪ ತಡೀರಿ, ನನ್ನ ಯಜಮಾನ್ರನ್ನ ಕೇಳಿಕೊಂಡು ಬರ್‍ತೀನಿ.

*ರಂಗಮ್ಮ:* ತಿಂದಾಗಲೇ ಗೊತ್ತಾಯ್ತು ಬಿಡಿ. ಅದು ನೀವು ಮಾಡಿದ್ದಲ್ಲ ಎಂದು.

★★★

*ರಂಗ:* ನನ್ನ ತಂದೆ ಒಂದೇ ಕೈಯಿಂದ ವಾಹನಗಳನ್ನು ನಿಲ್ಲಿಸಿಬಿಡುತ್ತಾರೆ.

*ಸಿಂಗ:* ಅವರೇನು ಪೈಲ್ವಾನರೇ?

*ರಂಗ:* ಅಲ್ಲ... ಅವರು ಸಂಚಾರಿ ಪೊಲೀಸ್ ಕಾನ್‌ಸ್ಟೇಬಲ್.

–ಎಂ.ಮೋಹನ್ ರಾವ್



*ಯಜಮಾನಿ:* 'ನೋಡಮ್ಮಾ ಈ ರೀತಿ ಅಲಂಕಾರ ಮಾಡಿಕೊಂಡು ನಾಳೆಯಿಂದ ನೀನು ಕೆಲಸಕ್ಕೆ ಬರಬೇಡ! ನಿನ್ನನ್ನು ಕೆಲಸದಿಂದ ತೆಗೆದು ಹಾಕಿದ್ದೇನೆ'.

*ಕೆಲಸದಾಕೆ:* ಅಲ್ಲಾ ಅಮ್ಮಾವ್ರೆ! ನಾನು ಕೆಲಸಕ್ಕೆ ಸೇರಿ ಈಗ ತಾನೆ ಆರು ತಿಂಗಳಾಗಿದೆ. ಅದ್ಯಾಕೆ ನಾಳೆಯಿಂದ ಕೆಲಸಕ್ಕೆ ಬರಬೇಡಾ ಅಂತೀರಿ?

*ಯಜಮಾನಿ:* 'ನಿಂದೇನೂ ತಪ್ಪಿಲ್ಲ ಕಣಮ್ಮಾ! ನಮ್ಮೆಜಮಾನರಿಗೆ ಕಣ್ಣು ಆಪರೇಷನ್ ಆಗಿದೆ. ಈಗ ಅವರಿಗೆ ಕಣ್ಣು ತುಂಬಾ ಚೆನ್ನಾಗಿ ಕಾಣಿಸುತ್ತದೆ.

ಸಂಗ್ರಹ: ಎಂ.ಕೆ. ಮಂಜುನಾಥ್